ಸಂಖ್ಯೆ: ಮಿಮ್ಸ್/ಕಟ್ಟಡ/ಇಟಿಪಿ/ಎಸ್‌ಟಿಪಿ/2012–13 ದಿನಾಂಕ: 24.10.2013

## ಸಭೆಯ ನಡವಳಿ

**ಮಿಮ್ಸ್ ಸಂಸ್ಥೆಗೆ 300 ಕೆ.ಎಲ್.ಡಿ. ಸಾಮರ್ಥ್ಯದ ದ್ರವ್ಯ ತ್ಯಾಜ್ಯ ಘಟಕ ಸ್ಥಾಪಿಸುವ ಸಂಬಂಧ ಆರ್ಥಿಕ ಬಿಡ್‌ನ ದರಗಳ ಸಂಧಾನಕ್ಕೆ ಸಂಬಂಧಿಸಿದಂತೆ ದಿನಾಂಕ:24.10.2013 ರಂದು ಮತ್ತೊಮ್ಮೆ ಜರುಗಿದ ದರಗಳ ಸಂಧಾನದ ಬಗ್ಗೆ ಟೆಂಡರ್ ಪರಿಶೀಲನಾ ಸಮಿತಿ ಸಭೆ ನಡವಳಿಗಳು:**

*ದಿನಾಂಕ: 17.10.2013 ರಂದು ಅರ್ಹ ಟೆಂಡರ್‌ದಾರರಾದ* M/s AQUA CHEM TACH INTERNATIONAL, Bangalore, ರವರನ್ನು *ದರಗಳ ಸಂಧಾನಕ್ಕೆ ಮತ್ತೊಮ್ಮೆ ಆಹ್ವಾನಿಸಲಾಗಿತ್ತು. ಟೆಂಡರ್‌ದಾರರು ದಿನಾಂಕ: 24.10.2013 ರಂದು ದರಗಳ ಸಂಧಾನಕ್ಕೆ ಹಾಜರಾಗಿ, ಆರ್ಥಿಕ ಬಿಡ್‌ನಲ್ಲಿ ನಮೂದಿಸಿರುವ ಒಟ್ಟು ಮೊತ್ತ ರೂ. 1,42,80,000/- (ಒಟ್ಟು ಒಂದು ಕೋಟಿ ನಲವತ್ತೆರಡು ಲಕ್ಷದ ಎಂಭತ್ತು ಸಾವಿರ ರೂಪಾಯಿಗಳು ಮಾತ್ರ) ಗಳಿಗೆ 0.5% ನಂತೆ ರೂ. 71,400/- (ಒಟ್ಟು ಎಪ್ಪತ್ತೊಂದು ಸಾವಿರದ ನಾಲ್ಕು ನೂರು ರೂಪಾಯಿಗಳು ಮಾತ್ರ) ಗಳ ರಿಯಾಯಿತಿ ನೀಡಲಾಗಿದೆ. ಈಗಾಗಲೇ ನಮೂದಿಸಿರುವ ರಿಯಾಯಿತಿ ಮೊತ್ತಕ್ಕಿಂತ ಹೆಚ್ಚು ರಿಯಾಯಿತಿ ನೀಡಲು ಸಾಧ್ಯವಾಗುವುದಿಲ್ಲ ಎಂದು ಸಮಿತಿ ಸದಸ್ಯರ ಜೊತೆ ಚರ್ಚಿಸಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ತದನಂತರ ಸದರಿ ಟೆಂಡರ್‌ದಾರರು ಪ್ಲಾಂಟನ ಸುತ್ತಲು ಪೇವ್‌ಮೆಂಟ್ ಬ್ಲಾಕ್ ಅಳವಡಿಸಿಕೊಡಲು ಮತ್ತು ಸುಂದರವಾದ ಲಾನ್ ನಿರ್ಮಿಸಿಕೊಡಲು ಸಮ್ಮತಿಸಿರುತ್ತಾರೆ.*

*ಸಮಿತಿಯು ಅಂತಿಮವಾಗಿ ರಿಯಾಯಿತಿ ನಂತರದ ಮೊತ್ತ ರೂ. 1,42,08,600/- (ಒಟ್ಟು ಒಂದು ಕೋಟಿ ನಲವತ್ತೇರಡು ಲಕ್ಷದ ಎಂಟು ಸಾವಿರದ ಆರು ನೂರು ರೂಪಾಯಿಗಳು ಮಾತ್ರ) ಗಳಿಗೆ ಒಪ್ಪಿ,* M/s AQUA CHEM TACH INTERNATIONAL, Bangalore, ರವರಿಗೆ ಕಾರ್ಯದೇಶ ನೀಡಲು ಸರ್ಕಾರದ ಅನುಮೋದನೆ ಪಡೆಯಲು *ತೀರ್ಮಾನಿಸಿತು.*

ಇತರೇ ವಿಷಯವನ್ನು ಚರ್ಚಿಸಿ ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

| | | | |
|---|---|---|---|
| ಮುಖ್ಯ ಆಡಳಿತಾಧಿಕಾರಿಗಳು<br>ಸದಸ್ಯ ಕಾರ್ಯದರ್ಶಿಗಳು<br>ಮಿಮ್ಸ್, ಮಂಡ್ಯ. | ಆರ್ಥಿಕ ಸಲಹೆಗಾರರು,<br>ಸಮಿತಿ ಸದಸ್ಯರು<br>ಮಿಮ್ಸ್, ಮಂಡ್ಯ | ವೈದ್ಯಕೀಯ ಅಧೀಕ್ಷಕರು,<br>ಸಮಿತಿ ಸದಸ್ಯರು<br>ಮಿಮ್ಸ್ ಬೋಧಕ ಆಸ್ಪತ್ರೆ ಮಂಡ್ಯ. | ನಿರ್ದೇಶಕರು,<br>ಸಮಿತಿ ಅಧ್ಯಕ್ಷರು<br>ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,<br>ಮಂಡ್ಯ. |